# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಂಗಳೂರು ನಗರ ಜಿಲ್ಲೆಗೆ ಹೆಚ್ಚುವರಿ ಜಿಲ್ಲಾ ತನಿಖಾ ಸಮಿತಿಗಳನ್ನು ರಚಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಮಮಇ 260 ಮಭಾಬ 2017, ದಿನಾಂಕ:10.01.2017.
2. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು, ಇವರ ಪ್ರಸ್ತಾವನೆ ಸಂಖ್ಯೆ: ಕೆ.ಎಸ್.ಐ.ಸಿ.ಪಿ.ಎಸ್/CNCP/ಹೆ.ಸ/14/2019-20 ದಿನಾಂಕ: 26.11.2020.

15.02.2021 P.D.)

************

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಬಾಲನ್ಯಾಯ ಕಾಯ್ದೆ,2015 ಸೆಕ್ಷನ್ 54(1) ಹಾಗೂ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಮಾದರಿ ನಿಯಮಗಳು, 2016 ನಿಯಮ 41(1) ರನ್ವಯ ಅಧ್ಯಕ್ಷರು ಮತ್ತು ಸದಸ್ಯರನ್ನೊಳಗೊಂಡ ರಾಜ್ಯ ಹಾಗೂ ಜಿಲ್ಲಾ ಮಟ್ಟದ ತನಿಖಾ ಸಮಿತಿಗಳನ್ನು ರಚಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರು, ಜಿಲ್ಲಾ ತನಿಖಾ ಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಜಿಲ್ಲೆಯಲ್ಲಿನ ಎಲ್ಲಾ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಬೇಕಾಗಿದ್ದು. ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚು ಪಾಲನಾ ಸಂಸ್ಥೆಗಳಿರುವುದರಿಂದ ಕೇವಲ ಒಂದೇ ತನಿಖಾ ಸಮಿತಿಯು ಎಲ್ಲಾ ಪಾಲನಾ ಸಂಸ್ಥೆಗಳನ್ನು ಪ್ರತೀ 3 ತಿಂಗಳಿಗೊಮ್ಮೆ ಭೇಟಿ ಮಾಡಲು ಸಾಧ್ಯವಾಗುತ್ತಿರುವುದಿಲ್ಲ. ಜಿಲ್ಲೆಯಲ್ಲಿ 160 ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ಇನ್ನೂ ಹಲವಾರು ಮಕ್ಕಳ ಪಾಲನಾ ಸಂಸ್ಥೆಗಳು ನೊಂದಣಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ ಮತ್ತು ನೋಂದಾಯಿತ ಹಾಗೂ ನೋಂದಣಿಗಾಗಿ ಬರುವ ಸಂಸ್ಥೆಗಳಿಗೆ ಜಿಲ್ಲಾ ತನಿಖಾ ಸಮಿತಿಗಳು ಬೇಟಿ ನೀಡಿ ವರದಿಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ,ICDS ಯೋಜನಾವಾರು ತನಿಖಾ ಸಮಿತಿಗಳನ್ನು ರಚಿಸ ಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚಿನ ಪಾಲನಾ ಸಂಸ್ಥೆಗಳು ಇರುವುದರಿಂದ ಒಂದೇ ತಿನಖಾ ಸಮಿತಿಯು ಎಲ್ಲಾ ಪಾಲನಾ ಸಂಸ್ಥೆಗಳು ಪ್ರತಿ 3 ತಿಂಗಳಿಗೊಮ್ಮೆ ಬೇಟಿ ನೀಡಲು ಸಾದ್ಯವಾಗುತ್ತಿರುವುದಿಲ್ಲ ಆದ್ದರಿಂದ ಬೆಂಗಳೂರು ನಗರ ಜಿಲ್ಲೆಗೆ ಆನೇಕಲ್, ಕೇಂದ್ರ, ಉತ್ತರ, ದಕ್ಷಿಣ ಮತ್ತು ಪೂರ್ವ ಯೋಜನೆಗಳಿಗೆ ಒಂದರಂತೆ ಒಟ್ಟು 5 ತನಿಖಾ ಸಮಿತಿಗಳನ್ನು ರಚಿಸಬೇಕಾಗಿರುತ್ತದೆ. ಇದರಿಂದ ಮದರ್ ತರಸಾ ಮಕ್ಕಳ ಆಶ್ರಮದಲ್ಲಿ ನಡೆದಂತಹ ಲೈಂಗಿಕ ದೌರ್ಜನ್ಯ ಪ್ರಕರಣಗಳು ಮತ್ತೊಮ್ಮೆ ಜರುಗದಂತೆ ಕ್ರಮ ವಹಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರಸ್ತುತ ಇರುವ ಜಿಲ್ಲಾ ತನಿಖಾ ಸಮಿತಿ ಜೊತೆಗೆ ಹೆಚು ವರಿಯಾಗಿ ಬೆಂಗಳೂರು ನಗರ ಜಿಲ್ಲೆಗೆ 4 ಜಿಲ್ಲಾ ತನಿಖಾ ಸಮಿತಿಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ಯೋಜನೆಯ ಪರಿಣಾಮಕಾರಿ ಅನಿಷ್ಟಾನಕ್ಕಾಗಿ ಈ ಕೆಳಗಿನಂತೆ ತನಿಖಾ ಸಮಿತಿಗಳನ್ನು ರಚಿಸಿ ಆದೇಶಿಸುವಂತೆ ಕೋರಿರುತ್ತಾರೆ.

## ಹೆಚ್ಚುವರಿ ಜಿಲ್ಲಾ ತನಿಖಾ ಸಮಿತಿ

| ಕ್ರ.ಸಂಖ್ಯೆ | ಸಮಿತಿಯ ಸದಸ್ಯರು | ಪದನಾಮ |
|---|---|---|
| 1. | ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ | ಸದಸ್ಯ ಕಾರ್ಯದರ್ಶಿಗಳು |
| 2. | ಮಕ್ಕಳ ಹಕ್ಕು. ರಕ್ಷಣೆ, ಪೋಷಣೆ ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಪ್ರತಿನಿಧಿಗಳು | ಸದಸ್ಯರು |
| 3. | ಸಂಬಂಧಿಸಿದ ತನಿಖಾ ಸಮಿತಿ ವ್ಯಾಪ್ತಿಯ VMO/ ಆರೋಗ್ಯ ಇಲಾಖೆಯಿಂದ ನಿಯೋಜಿಸಲ್ಪಟ್ಟ ವೈದ್ಯಾಧಿಕಾರಿಗಳು | ಸದಸ್ಯರು |
| 4. | ನಿಮ್ಹಾನ್ಸ್ ಸಂಸ್ಥೆಯಿಂದ ನಿಯೋಜಿಸಲ್ಪಟ್ಟ ಮಾನಸಿಕ ಆರೋಗ್ಯ ತಜ್ಞರು | ಸದಸ್ಯರು |
| 5. | ಮಕ್ಕಳ ಕಲ್ಯಾಣ ಸಮಿತಿ/ ಬಾಲ ನ್ಯಾಯ ಮಂಡಳಿಯ ಸದಸ್ಯರು | ಸದಸ್ಯರು |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮ ಇ 218 ಮಭಾಬ 2020, ಬೆಂಗಳೂರು,**
**ದಿನಾಂಕ: 12.02.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚು ಪಾಲನಾ ಸಂಸ್ಥೆಗಳಿರುವುದರಿಂದ ಪ್ರಸ್ತುತ ಇರುವ ಜಿಲ್ಲಾ ತನಿಖಾ ಸಮಿತಿ ಜೊತೆಗೆ ಹೆಚ್ಚುವರಿಯಾಗಿ ಬೆಂಗಳೂರು ನಗರ ಜಿಲ್ಲೆಗೆ 4 ಜಿಲ್ಲಾ ತನಿಖಾ ಸಮಿತಿಗಳನ್ನು (ಆನೇಕಲ್, ಕೇಂದ್ರ, ಉತ್ತರ, ದಕ್ಷಿಣ ಮತ್ತು ಪೂರ್ವ ಯೋಜನೆಗಳಿಗೆ ಒಂದರಂತೆ ಒಟ್ಟು 5 ತನಿಖಾ ಸಮಿತಿಗಳು) ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈ ಕೆಳಗಿನಂತೆ ಮುಂದಿನ ಆದೇಶದವರೆಗೆ ರಚಿಸಿ ಆದೇಶಿಸಿದೆ.

**ಹೆಚ್ಚುವರಿ ಜಿಲ್ಲಾ ತನಿಖಾ ಸಮಿತಿ**

| ಕ್ರ.ಸಂ | ಸಮಿತಿಯ ಸದಸ್ಯರು | ಪದನಾಮ |
|---|---|---|
| 1. | ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ | ಸದಸ್ಯ ಕಾರ್ಯದರ್ಶಿಗಳು |
| 2. | ಮಕ್ಕಳ ಹಕ್ಕು. ರಕ್ಷಣೆ, ಪೋಷಣೆ ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಪ್ರತಿನಿಧಿಗಳು | ಸದಸ್ಯರು |
| 3. | ಸಂಬಂಧಿಸಿದ ತನಿಖಾ ಸಮಿತಿ ವ್ಯಾಪ್ತಿಯ VMO/ ಆರೋಗ್ಯ ಇಲಾಖೆಯಿಂದ ನಿಯೋಜಿಸಲ್ಪಟ್ಟ ವೈದ್ಯಾಧಿಕಾರಿಗಳು | ಸದಸ್ಯರು |
| 4. | ನಿಮ್ಹಾನ್ಸ್ ಸಂಸ್ಥೆಯಿಂದ ನಿಯೋಜಿಸಲ್ಪಟ್ಟ ಮಾನಸಿಕ ಆರೋಗ್ಯ ತಜ್ಞರು | ಸದಸ್ಯರು |
| 5. | ಮಕ್ಕಳ ಕಲ್ಯಾಣ ಸಮಿತಿ/ ಬಾಲ ನ್ಯಾಯ ಮಂಡಳಿಯ ಸದಸ್ಯರು | ಸದಸ್ಯರು |

ಜಿಲ್ಲಾ/ ಹೆಚ್ಚುವರಿ ತನಿಖಾ ಸಂಸ್ಥೆಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಕರ್ತವ್ಯ ಮತ್ತು ಜವಬ್ದಾರಿಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಮಮಇ 260 ಮಭಾಬ 2017, ದಿನಾಂಕ:10.01.2017ರ ಅನುಬಂಧದಲ್ಲಿ ಇರುವಂತೆ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

12/2/21
(ವಿ. ಭಾಗ್ಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಹಾಗೂ ಹಿರಿಯ ನಾಗರೀಕರ ಸಬಲೀಕರಣಇಲಾಖೆ(ಡಿಶಾಖೆ).

**ಇವರಿಗೆ:**

1.ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು-560001
2.ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು.
2.ನಿರ್ದೇಶಕರು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು.
3.ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಸೊಸೈಟಿ, ಬೆಂಗಳೂರು.
4.ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10) ವಿಧಾನ ಸೌಧ, ಬೆಂಗಳೂರು.
5.ಸಂಬಂಧಪಟ್ಟ ಬಾಲನ್ಯಾಯ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು.
6.ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
7.ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ. } ಮಕ್ಕಳ ರಕ್ಷಣಾ ನಿರ್ದೇಶನಾಲಯ ನಿರ್ದೇಶಕರ ಮುಖಾಂತರ
8.ಜಿಲ್ಲಾ ತನಿಖಾ ಸಮಿತಿಯ ಎಲ್ಲಾ ಸದಸ್ಯರುಗಳು.
9.ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.